KACM510002772026

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ನರಸಿಂಹರಾಜಪುರ**

**ಸಿ. ಸಿ. ನಂಃ171/2026**

ಫಿರ್ಯಾದುದಾರರುಃ ಸರ್ಕಾರದ ಪರವಾನಗಿ ಎನ್. ಆರ್. ಪುರ ಪೊಲೀಸರು

ವಿರುದ್ಧ

ಆರೋಪಿ ಃ

1. ಶ್ರೀ ಅರುಣ್ ಕುಮಾರ್, ಬಿನ್ ಮಾದೇಗೌಡ, 31 ವರ್ಷ, ಚಾಲಕ ವೃತ್ತಿ, ವಾಸ ಃ ಗೋಣಿಬೀಡು, ಭದ್ರಾವತಿ ತಾಲ್ಲೂಕು, ಶಿವಮೊಗ್ಗ.

2. ಶ್ರೀ ಎಸ್. ಶಂಕರ, ಬಿನ್ ಸಣ್ಣೇಗೌಡ, 35 ವರ್ಷ, ಕೃಷಿ ಕೆಲಸ, ವಾಸಃ ಗೋಣಿಬೀಡು, ವಾಸಃ ಗೋಣಿಬೀಡು, ಭದ್ರಾವತಿ ತಾಲ್ಲೂಕು, ಶಿವಮೊಗ್ಗ.

3. ಶ್ರೀ ಲವ, ಬಿನ್ ಮಂಜಪ್ಪಗೌಡ, 35 ವರ್ಷ, ವಾಸಃ ಕಳ್ಳಿಕೊಪ್ಪ, ಸಿಂಸೆ ಗ್ರಾಮ, ನ.ರಾ.ಪುರ ತಾಲ್ಲೂಕು.

## ಆರೋಪಣೆ

ದಿನಾಂಕಃ 13.03.2026 ರಂದು ಬೆಳಿಗ್ಗೆ 11-15 ಗಂಟೆ ಸಮಯದಲ್ಲಿ ನ.ರಾ.ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಸೌತಿಕೆರೆ ಈಶ್ವರ ದೇವಸ್ಥಾನದ ಬಳಿ ನ.ರಾ.ಪುರ – ಶಿವಮೊಗ್ಗ ರಸ್ತೆಯಲ್ಲಿ ಚಾಸಾ-1 ರವರು ತಮ್ಮ ಸಿಬ್ಬಂಧಿಗಳಾದ ಚಾಸಾ-6, 7, 8 ಮತ್ತು 9 ರವರುಗಳೊಂದಿಗೆ ವಾಹನಗಳ ತಪಾಸಣೆ ನಡೆಸುತ್ತಿರುವಾಗ 1 ಮತ್ತು 2 ನೇ ಆರೋಪಿತರಾದ ನೀವುಗಳು ಕೆಎ.14 – ಸಿ.2539 ನಂಬರಿನ ಟಾಟಾ ಏಸ್ ಗೂಡ್ಸ್ ವಾಹನದಲ್ಲಿ 3 ನೇ ಆರೋಪಿಯಾದ ನಿಮಗೆ ಸೇರಿದ 2 ಹೋರಿಕರುಗಳನ್ನು ಗಾಳಿ ಬೆಳಕು ಇಲ್ಲದ, ಹುಲ್ಲು ನೀರು ಕೊಡದೆ ಒಂದರಪಕ್ಕ ಒಂದನ್ನು ಹಿಂಸಾತ್ಮಕ ರೀತಿಯಲ್ಲಿ ತುಂಬಿಕೊಂಡು ಸಾಗಾಟ ಮಾಡುತ್ತಿದ್ದು, ಆ ಮೂಲಕ ನೀವುಗಳು

KACM510002772026

ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯಿದೆ ಕಲಂ 11(1)(ಡಿ)ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಎಸಗಿರುತ್ತೀರಿ.

ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ 1 ಮತ್ತು 2ನೇ ಆರೋಪಿತರಾದ ನೀವುಗಳು ಕೆಎ.14 – ಸಿ.2539 ನಂಬರಿನ ಟಾಟಾ ಏಸ್ ಗೂಡ್ಸ್ ವಾಹನದಲ್ಲಿ 3ನೇ ಆರೋಪಿಯಾದ ನಿಮಗೆ ಸೇರಿದ 2 ಹೋರಿಕರುಗಳನ್ನು ಸಾಗಾಟ ಮಾಡಲು ಯಾವುದೆ ಪರವಾನಿಗೆ ಮತ್ತು ರಹದಾರಿ ಇಲ್ಲದೆ ಇದ್ದರೂ 2 ಹೋರಿಕರುಗಳನ್ನು ತುಂಬಿಕೊಂಡು ಸಾಗಾಟ ಮಾಡುತ್ತಿರುತ್ತೀರಿ. ಆ ಮೂಲಕ ನೀವು ಭಾ.ಮೋ.ವಾ. ಕಾಯಿದೆ ಕಲಂ 196ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಎಸಗಿರುತ್ತೀರಿ.

ಪ್ರ:1ಃ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉಃ

ಪ್ರ:2. ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉಃ

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕಃ 22ನೇ ದಿವಸ ಜುಲೈ ಮಾಹೆ 2026.

(ರಘುನಾಥ ಗೌಡ ಕೆ.ಟಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ
ನ.ರಾ.ಪುರ.

ಆರೋಪಿಯ ಸಹಿಃ

1.

2.

3.